



'ನಿವೃತ್ತಿಯನ್ನು ಹಿಂಪಡೆಯಿರಿ. ಫುಟ್‌ಬಾಲ್ ದಿಗ್ಗಜ ಲಯೋನೆಲ್ ಮೆಸ್ಸಿ ಈ ಹಿಂದೆ ನಿವೃತ್ತಿ ಘೋಷಿಸಿದ್ದರು. ನಂತರ ಹಿಂಪಡೆದಿದ್ದರು. ನೀವು ಕ್ರಿಕೆಟ್ ಲೋಕದ ಮೆಸ್ಸಿ ಇದ್ದಂತೆ. ನಿಮ್ಮ ಆಟ ಇನ್ನೂ ಬಾಕಿ ಇದೆ. ಮರಳಿ ಬನ್ನಿ..'

–ಮೇ 24ರಂದು ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ಆಟಗಾರ ಎಬಿ ಡಿವಿಲಿಯರ್ಸ್ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ದಿಢೀರ್ ನಿವೃತ್ತಿ ಘೋಷಿಸಿದಾಗ ಅಭಿಮಾನಿಯೊಬ್ಬರು ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿದ ರೀತಿ ಇದು.

ಅವರ ಬಹುತೇಕ ಅಭಿಮಾನಿಗಳದ್ದು ಇದೇ ರೀತಿಯ ಪ್ರತಿಕ್ರಿಯೆ. ಕ್ರಿಕೆಟ್ ಜಗತ್ತಿನ ದಿಗ್ಗಜರು, ಅವರ ಸಮಕಾಲೀನರು, ಕಿರಿಯ ಆಟಗಾರರದ್ದೂ ಇದೇ ಭಾವ. 'ಇಷ್ಟು ಬೇಗ ಏಕೆ ನಿವೃತ್ತಿ?' ಎಂಬ ಪ್ರಶ್ನೆಗೆ ಅವರೇ ಉತ್ತರ ನೀಡಿದ್ದರು. 'ನಾನು ದಣಿದಿದ್ದೇನೆ. ಇಷ್ಟು ದಿವಸ ನೀಡಿದ ಹೊಣೆಯನ್ನು ನಿಭಾಯಿಸಿರುವೆ. ಅದನ್ನು ಜೂನಿಯರ್‌ಗಳಿಗೆ ವಹಿಸುತ್ತಿದ್ದೇನೆ. ಅವರು ಮುನ್ನಡೆಸಲಿ' ಎಂದು ಎಬಿಡಿ ಟ್ವೀಟ್ ಮಾಡಿದ್ದರು.

ಅವರ ಆಟವನ್ನು ಗಮನಿಸಿದವರು ಈ ಮಾತನ್ನು ಒಪ್ಪಲಾರರು. ಏಕೆಂದರೆ ಅವರ ಮಿಂಚಿನ ವೇಗದ ಫೀಲ್ಡಿಂಗ್, ಸ್ಫೋಟಕ ಬ್ಯಾಟಿಂಗ್, ಸ್ನೇಹಪರ ವ್ಯಕ್ತಿತ್ವಗಳಿಂದ ಅವರು ದಣಿದಿದ್ದಾರೆಂದು ಅನಿಸುವುದೇ ಇಲ್ಲ. ಆದರೆ ಎಬಿಡಿ ಯಶಸ್ಸಿನ ಉತ್ತುಂಗದಲ್ಲಿದ್ದಾಗಲೇ ಇಂಥ ನಿರ್ಧಾರಕ್ಕೆ ಬಂದಿದ್ದಾರೆ. 'ಬಿಟ್ಟು ಹೋಗು' ಎಂದು ಪರರು ಹೇಳುವ ಮುನ್ನವೇ ನಿರ್ಗಮಿಸಿದ್ದಾರೆ. 'ಕ್ರಿಕೆಟ್ ಲೋಕದ ಅರಸನಂತೆ ಮೆರೆದು, ಮಹಾರಾಜನ ಪಟ್ಟ ಬಿಟ್ಟುಕೊಟ್ಟಿದ್ದಾರೆ' ಎಂದು ದಕ್ಷಿಣ ಆಫ್ರಿಕಾದ ಇಂಗ್ಲಿಷ್ ಪತ್ರಿಕೆಯೊಂದು ನೀಡಿದ್ದ ತಲೆಬರಹ 'ಮಿಸ್ಟರ್ 360 ಡಿಗ್ರಿ' ಎಬಿಡಿ ವ್ಯಕ್ತಿತ್ವವನ್ನು ಬಿಂಬಿಸಿತ್ತು!

ಎಬಿಡಿ ತಮ್ಮ ವಿಶಿಷ್ಟ ರೀತಿಯ ಬ್ಯಾಟಿಂಗ್ ಮೂಲಕ ಅಭಿಮಾನಿಗಳಿಗೆ 'ಮಿಸ್ಟರ್ 360 ಡಿಗ್ರಿ' ಆಗಿದ್ದರು.

ವೇಗದ ಬೌಲರ್‌ಗಳ ಎಸೆತಗಳನ್ನು ಮಂಡಿಯೂರಿ ಕುಳಿತು ಸ್ಕೂಪ್ ಮಾಡುತ್ತಿದ್ದ ಅವರ ಆತ್ಮವಿಶ್ವಾಸಕ್ಕೆ ಮನಸೋಲದವರಿಲ್ಲ. ಕೊನೆಯ ಹಂತದ ಓವರ್‌ಗಳಲ್ಲಿ ಅವರು ಕ್ರೀಸ್‌ನಲ್ಲಿದ್ದರೆ ಬೌಲರ್‌ಗಳು ಲೈನ್ ಮತ್ತು ಲೆಂಗ್ತ್ ಮರೆತು ಬೌಲಿಂಗ್ ಮಾಡುವುದೊಂದೇ ದಾರಿ. ಚೆಂಡನ್ನು ವಿಕೆಟ್‌ಕೀಪರ್ ತಲೆಮೇಲಿಂದ ಸಿಕ್ಸರ್‌ಗೆ ಎತ್ತುತ್ತಿದ್ದ ಅವರ ಸ್ಕೂಪ್‌ನ ಪರಿ ಹಲವು ಯುವ ಆಟಗಾರರಿಗೆ ಪಾಠವಾಗಿದ್ದು ಸುಳ್ಳಲ್ಲ. ದೆಹಲಿಯ ರಿಷಭ್ ಪಂತ್, ಸಂಜು ಸ್ಯಾಮ್ಸನ್, ಕರ್ನಾಟಕದ ಕೆ.ಎಲ್. ರಾಹುಲ್ ಆ ಹೊಡೆತಗಳನ್ನು ಅನುಕರಿಸುವ ಪ್ರಯತ್ನ ಮಾಡುತ್ತಿದ್ದಾರೆ.

## ಬೆಂಗಳೂರು ನಂಟು; ಕನ್ನಡದ ಪ್ರೀತಿ

ದಕ್ಷಿಣ ಆಫ್ರಿಕಾದ ಎಬಿಡಿಗೂ ಬೆಂಗಳೂರಿಗೂ ಅವಿನಾವಭಾವ ಸಂಬಂಧ ಇದೆ. ಅದಕ್ಕೆ ಕಾರಣ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಅವರು 2011ರಿಂದ ಪ್ರತಿನಿಧಿಸುತ್ತಿದ್ದಾರೆ. ಅಂದಿನಿಂದ ಇಂದಿನವರೆಗೂ ಅವರು ಬೆಂಗಳೂರು ಕ್ರಿಕೆಟ್‌ಪ್ರಿಯರ ಕಣ್ಮಣಿಯಾಗಿದ್ದಾರೆ.

ಇತ್ತೀಚೆಗಷ್ಟೇ ರಿಕ್ಷಾದಲ್ಲಿ ತಮ್ಮ ಪತ್ನಿ, ಮಗನೊಂದಿಗೆ ಪ್ರಯಾಣಿಸುತ್ತ ಬೆಂಗಳೂರಿನ ರಸ್ತೆಗಳಲ್ಲಿ ಅಭಿಮಾನಿಗಳ ಜೊತೆ ನಲಿದಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು. 2015ರ ನವೆಂಬರ್‌ನಲ್ಲಿ ಮಹಾತ್ಮಾ ಗಾಂಧಿ–ನೆಲ್ಸನ್ ಮಂಡೇಲಾ ಕ್ರಿಕೆಟ್ ಸರಣಿಯ ಟೆಸ್ಟ್ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿತ್ತು. ಅದು ಎಬಿಡಿಗೆ 100ನೇ ಟೆಸ್ಟ್ ಪಂದ್ಯ. ಎರಡನೇ ದಿನದಾಟಕ್ಕೆ ಮಳೆ ಅಡ್ಡಿಪಡಿಸಿದ ಸಂದರ್ಭದಲ್ಲಿ ಮಾಧ್ಯಮ ಗ್ಯಾಲರಿಗೆ ಬಂದಿದ್ದ ಎಬಿಡಿ ಅವರ ತಾಯಿ ಮಿಲ್ಲಿ ಡಿವಿಲಿಯರ್ಸ್ ಹೇಳಿದ ಮಾತು ಎಬಿ ಮತ್ತು ಬೆಂಗಳೂರಿನ ನಂಟಿಗೆ ಸಾಕ್ಷಿಯಾಗಿತ್ತು.

'ನನ್ನ ಮಗನನ್ನು ಇಲ್ಲಿಯ (ಬೆಂಗಳೂರು) ಜನರು ಪ್ರೀತಿಸುತ್ತಿರುವ ಪರಿಯನ್ನ ಕಂಡು ಮಾತುಗಳೇ ಬರುತ್ತಿಲ್ಲ. ಎಬಿ ಪ್ರತಿವರ್ಷ ಐಪಿಎಲ್ ಟೂರ್ನಿಯಲ್ಲಿ ಆರ್‌ಸಿಬಿ ತಂಡದಲ್ಲಿ ಆಡಲು ಇಲ್ಲಿ ಬರುತ್ತಾರೆ. ಅವರು ನಿಮ್ಮ ಊರಿನವರೇ ಆಗಿಬಿಟ್ಟಿದ್ದಾರೆ' ಎಂದು ಮಿಲ್ಲಿ ಗದ್ಗದಿತರಾಗಿದ್ದರು. ಅವರ ಪಕ್ಕದಲ್ಲಿಯೇ ಕುಳಿತಿದ್ದ ಸೀನಿಯರ್ ಎಬಿಡಿ (ತಂದೆ), 'ಅವರಿಗೆ ಹಿಂದಿ ಕಲಿಸುವುದೊಂದೇ ಈಗ ಬಾಕಿಯಿದೆ' ಎಂದು ನಕ್ಕಿದ್ದರು.

ಎಬಿಡಿ ಒಂದಷ್ಟು ಕನ್ನಡ ಪದಗಳನ್ನು ಮಾತನಾಡುವುದನ್ನು ಕಲಿತಿದ್ದಾರೆ. ಇತ್ತೀಚೆಗೆ ನಡೆದ ಐಪಿಎಲ್ ಸಂದರ್ಭದಲ್ಲಿ ಟಿವಿ ಕಾರ್ಯಕ್ರಮವೊಂದರಲ್ಲಿ ಅವರು ಮೌತ್ ಆರ್ಗನ್‌ನಲ್ಲಿ ಡಾ. ರಾಜ್‌ಕುಮಾರ್ ಅವರ ಹಾಡು ನುಡಿಸಿದ್ದರು.

## ದಾಖಲೆಗಳು ಹಲವು

ಏಕದಿನ ಕ್ರಿಕೆಟ್‌ನಲ್ಲಿ ಅತಿ ವೇಗದ ಶತಕದ ದಾಖಲೆ ಅವರ ಹೆಸರಿನಲ್ಲಿದೆ. ವೆಸ್ಟ್ ಇಂಡೀಸ್ ಎದುರು ಅವರು 31 ಎಸೆತಗಳಲ್ಲಿ ಶತಕ ದಾಖಲಿಸಿದ್ದರು. ಈ ಬಾರಿಯ ಐಪಿಎಲ್‌ನಲ್ಲಿ 12 ಪಂದ್ಯಗಳನ್ನು ಆಡಿ 480 ರನ್ ಗಳಿಸಿದ್ದರು.

ಆದರೆ ಅವರು ಆಡುವ ಸ್ಕೂಪ್ ಶಾಟ್, ಅತಿ ಎತ್ತರದ (111.1 ಮೀಟರ್ಸ್) ಸಿಕ್ಸರ್, ಬೌಂಡರಿಗೆರೆಯ ಬಳಿಯಲ್ಲಿ 'ಸ್ಪೈಡರ್ ಮ್ಯಾನ್' ರೀತಿಯಲ್ಲಿ ಹಾರಿ ಲಬಕ್ಕನೆ ಪಡೆದ ಕ್ಯಾಚ್, ನಿಖರ ಥ್ರೋ ಮೂಲಕ ಎದುರಾಳಿ ಬ್ಯಾಟ್ಸ್‌ಮನ್‌ಗಳನ್ನು ರನ್‌ಔಟ್ ಮಾಡಿದ ಪರಿ ಕ್ರಿಕೆಟ್ ಅಭಿಮಾನಿಗಳ ಮನಗಳಲ್ಲಿ ಅಚ್ಚಳಿಯದೇ ಉಳಿದಿವೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ನಿವೃತ್ತಿಯಾದರೂ ಮುಂದಿನ ಆವೃತ್ತಿಯಲ್ಲಿ ಆರ್‌ಸಿಬಿಯಲ್ಲಿ ಆಡುವ ನಿರೀಕ್ಷೆ ಇದೆ. 2004ರಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟ ಎಬಿಡಿ ನಡೆದಿದ್ದೇ ಹಾದಿ. ಅವರು ಸ್ಥಾಪಿಸಿದ ಮೈಲುಗಲ್ಲುಗಳನ್ನು ದಾಟುವವರು ಸದ್ಯಕ್ಕಂತೂ ಇಲ್ಲ.

### ಕೊಹ್ಲಿಗೆ 'ಸಹೋದರ'

ಎಬಿ ಡಿವಿಲಿಯರ್ಸ್ ಅವರನ್ನು ಭಾರತ ಕ್ರಿಕೆಟ್ ತಂಡದ ನಾಯಕ ವಿರಾಟ್ ಕೊಹ್ಲಿಯವರು ಸಹೋದರ ಎಂದು ಕರೆದಿದ್ದಾರೆ. ಡಿವಿಲಿಯರ್ಸ್‌ಗೆ ಶನಿವಾರ ಶುಭ ಕೋರಿರುವ ಕೊಹ್ಲಿ ನಿವೃತ್ತಿ ಬದುಕು ಖುಷಿಯಾಗಿ ಕಳೆಯಿರಿ ಎಂದಿದ್ದಾರೆ. 'ಸಹೋದರ, ನೀನು ಮಾಡಿದ ಎಲ್ಲ ಒಳ್ಳೆಯ ಕಾರ್ಯಗಳೂ ಖುಷಿ ನೀಡಿವೆ. ಬ್ಯಾಟಿಂಗ್‌ಗೆ ಹೊಸ ವ್ಯಾಖ್ಯಾನ ಬರೆದ ನೀನು ಅಂತರರಾಷ್ಟ್ರೀಯ ಕ್ರಿಕೆಟ್ ಕಳೆ ಹೆಚ್ಚಿಸಿದ್ದೀಯ' ಎಂದು ಕೊಹ್ಲಿ ಹೇಳಿದ್ದಾರೆ. ಐಪಿಎಲ್ ಟೂರ್ನಿಯಲ್ಲಿ ವಿರಾಟ್ ಮತ್ತು ಎಬಿಡಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದಲ್ಲಿ ಆಡುತ್ತಿದ್ದಾರೆ.

### ಮೂವರೂ ಎಬಿಡಿ!

ಡಿವಿಲಿಯರ್ಸ್ ಕುಟುಂಬದ ವಿಶೇಷ ಗೊತ್ತೆ? ಅವರ ತಂದೆ ಮತ್ತು ಅವರ ಮಗನ ಹೆಸರು ಕೂಡ ಎ.ಬಿ. ಡಿವಿಲಿಯರ್ಸ್! ಮಾಧ್ಯಮಗಳಲ್ಲಿ ತಂದೆಯನ್ನು ಎಬಿಡಿ ಸೀನಿಯರ್ ಮತ್ತು ಕ್ರಿಕೆಟರ್ ಎಬಿಡಿ ಮತ್ತು ಅವರ ಮಗನನ್ನು ಎಬಿಡಿ ಜೂನಿಯರ್ ಎಂದು ಕರೆಯಲಾಗುತ್ತಿದೆ.